ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 9-5-2017

# ಪತ್ರಿಕಾ ಆಮಂತ್ರಣ

1. ಗ್ರಾಫಿಕ್ ಕಲಾ ಕಮ್ಮಟ (ಮರದಚ್ಚು ಕಲೆ)

ಉದ್ಘಾಟನೆ:
ಅಶೋಕ್ ಎನ್. ಚಲವಾದಿ
ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅತಿಥಿ:
ನಾಗತಿಹಳ್ಳಿ ಚಂದ್ರಶೇಖರ,
ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕರು

ಅಧ್ಯಕ್ಷತೆ:
ಡಾ: ಎಂ.ಎಸ್. ಮೂರ್ತಿ,
ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ

ದಿನಾಂಕ: 10-5-2017 ಬುಧವಾರ ಬೆಳಿಗ್ಗೆ 11-00 ಗಂಟೆಗೆ
ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

2. ಬೀದರ್ ಜಿಲ್ಲೆಯ ಬಿದ್ರಿ ಕಲೆಯ ಪುನರುಜ್ಜೀವನ ಕಾರ್ಯಾಗಾರ ಹಾಗೂ ಪ್ರದರ್ಶನ

ಉದ್ಘಾಟನೆ:
ಶ್ರೀಮತಿ ವಿಮಲಾ ರಂಗಾಚಾರ್,
ಅಧ್ಯಕ್ಷರು, ಎಂ.ಇ.ಎಸ್. ಕಾಲೇಜು, ಬೆಂಗಳೂರು

ವಿಶೇಷ ಆಹ್ವಾನಿತರು:
ಡಾ: ಹೆಚ್.ಆರ್. ಮಹದೇವ್,
ಜಿಲ್ಲಾಧಿಕಾರಿಗಳು, ಬೀದರ್

ಅಧ್ಯಕ್ಷತೆ:
ಶ್ರೀ ಹರೀಶ್ ಜೆ. ಪದ್ಮನಾಭ,
ಉಪಾಧ್ಯಕ್ಷರು, ಕರ್ನಾಟಕ ಚಿತ್ರಕಲಾ ಪರಿಷತ್ತು

ದಿನಾಂಕ: 10–5–2017 ಬುಧವಾರ ಬೆಳಿಗ್ಗೆ 11–30 ಗಂಟೆಗೆ
ಸ್ಥಳ: ಚಿತ್ರಕಲಾ ಪರಿಷತ್ ಆವರಣ, ಕುಮಾರಕೃಪಾ ರಸ್ತೆ, ಬೆಂಗಳೂರು –560 001

3. ಪತ್ರಿಕಾಗೋಷ್ಠಿ:

ಎಂ.ಆರ್. ಸೀತಾರಾಂ,
ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ದಿನಾಂಕ: 10–5–2017 ಬುಧವಾರ, ಬೆಳಿಗ್ಗೆ 11–30 ಗಂಟೆಗೆ
ಸ್ಥಳ: ಬೆಂಗಳೂರು ಪ್ರೆಸ್ ಕ್ಲಬ್ ಆವರಣ, ಕಬ್ಬನ್‌ಪಾರ್ಕ್, ಬೆಂಗಳೂರು

4. ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಮುನ್ನಡೆಸುವ ಕುರಿತು ರಾಷ್ಟ್ರೀಯ ಅಂಕಿ ಅಂಶಗಳ ಆಯೋಗದ ಮುಖ್ಯಸ್ಥ ಡಾ: ಆರ್.ಬಿ. ಬರ್ಮನ್ ಅವರಿಂದ ಪರಿಶೀಲನೆ ಹಾಗೂ ಸಭೆ

ಉಪಸ್ಥಿತರರು:
ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಅಧ್ಯಕ್ಷ ಎಸ್.ವಿ. ರಂಗನಾಥ್, ಅನೂಪ್ ಕೆ. ಪೂಜಾರಿ, ನಿರ್ದೇಶಕರು ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್

ದಿನಾಂಕ: 10–5–2017 ಬುಧವಾರ ಮಧ್ಯಾಹ್ನ 2–30 ಗಂಟೆಗೆ

ಸ್ಥಳ; ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ಗೌರ್ನಮೆಂಟ್ ಇನ್ಸ್‌ಟಿಟ್ಯೂಟ್ ಆಫ್ ಪ್ರಿಂಟಿಂಗ್ ಟೆಕ್ನಾಲಜಿ ಬಿಲ್ಡಿಂಗ್, ನಂ. 1 ಅರಮನೆ ರಸ್ತೆ, ಬೆಂಗಳೂರು

5. ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ:

ಉದ್ಘಾಟನೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 10-5-2017, ಬುಧವಾರ, ಸಂಜೆ 5-00 ಗಂಟೆಗೆ
ಸ್ಥಳ: ಬ್ಯಾಂಕ್ವೆಟ್‌ಹಾಲ್, ವಿಧಾನ ಸೌಧ, ಬೆಂಗಳೂರು

6. ಮಾವು ಮಾರಾಟ ಮೇಳ:

ಉದ್ಘಾಟನೆ:
ಎಂ. ಕೃಷ್ಣಪ್ಪ, ವಸತಿ ಸಚಿವರು
ಎಲ್. ಗೋಪಾಲಕೃಷ್ಣ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ(ನಿ)

ದಿನಾಂಕ: 10-5-2017 ಬುಧವಾರ, ಸಂಜೆ 5-00 ಗಂಟೆಗೆ
ಸ್ಥಳ: ಮೈಸೂರು ರಸ್ತೆ ಮೆಟ್ರೋ ನಿಲ್ದಾಣ (ನಾಯಂಡಹಳ್ಳಿ), ಬೆಂಗಳೂರು.

# ಪತ್ರಿಕಾ ಪ್ರಕಟಣೆ

## ಕಾವೇರಿ ಕಣಿವೆಯ ನಿರ್ವಹಣೆ ಕುರಿತ ತಜ್ಞರ ಸಮಿತಿ ರಚನೆ, ನಾರಿಮನ್ ಜೊತೆ ಸಮಾಲೋಚಿಸಿ ರಾಜ್ಯದ ಅಂತಿಮ ನಿಲುವು : ಸರ್ವಪಕ್ಷಗಳ ಸದನ ನಾಯಕರ ಸರ್ವಾನುಮತದ ತೀರ್ಮಾನ

ಬೆಂಗಳೂರು, ಮೇ 9 ( ಕರ್ನಾಟಕ ವಾರ್ತೆ) :

ಕಾವೇರಿ ಕಣಿವೆಯ ನಿರ್ವಹಣೆ ಕುರಿತ ತಜ್ಞರ ಸಮಿತಿ ರಚನೆಗೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯದಲ್ಲಿನ ರಾಜ್ಯದ ಪರ ವಕೀಲ ಫಾಲಿ ಎಸ್ ನಾರಿಮನ್ ಅವರ

ಜೊತೆಯಲ್ಲಿ ಮುಂದಿನ ವಾರ ಸಮಾಲೋಚಿಸಿ, ರಾಜ್ಯದ ಅಂತಿಮ ನಿಲುವನ್ನು ಜಲ ಸಂಪನ್ಮೂಲ ಮಂತ್ರಾಲಯಕ್ಕೆ ತಿಳಿಸಲು ಸರ್ವ ಪಕ್ಷಗಳ ಸದನ ನಾಯಕರ ಸಭೆಯಲ್ಲಿ ಇಲ್ಲಿ ಇಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಕಾವೇರಿ ಕಣಿವೆಯ ನಿರ್ವಹಣೆ ಕುರಿತ ತಜ್ಞರ ಸಮಿತಿ ರಚನೆಗೆ ಸಂಬಂಧಿಸಿದಂತೆ ನಡೆದ ಸುದೀರ್ಘ ಚರ್ಚೆಯಲ್ಲಿ ರಾಜ್ಯದ ಪರ ವಕೀಲರು ಹಾಗೂ ರಾಜ್ಯದ ಅಡ್ವೋಕೇಟ್ ಜನರಲ್ ಕೇಂದ್ರ ಸರ್ಕಾರದ ಸಂದೇಶದಲ್ಲಿ ಉಲ್ಲೇಖಿಸಿರುವ ಕಾನೂನು ವ್ಯಾಪ್ತಿಯ ಆರು ಅಂಶಗಳ ಸೂತ್ರದ ಸಾಧಕ–ಬಾಧಕಗಳ ಬಗ್ಗೆ ಸಭೆಯ ಗಮನ ಸೆಳೆದರು.

ತಜ್ಞರ ಸಮಿತಿ ರಚನೆಗೆ ಸಂಬಂಧಿಸಿದಂತೆ ಜಲ ಸಂಪನ್ಮೂಲ ಮಂತ್ರಾಲಯದ ಸಂದೇಶ ಕುರಿತಂತೆ ಅಂತಾರಾಜ್ಯ ಜಲ ವಿವಾದ ಕಾಯಿದೆ – 1956 ಅನ್ವಯ ರಾಜ್ಯಗಳ ಸಮ್ಮತಿ ಇಲ್ಲದೆಯೇ ಮಾಸಿಕ ಹರಿವು ನಿರ್ಧರಿಸಲು ಅಥವಾ ಸಂಕಷ್ಟ ಹಂಚಿಕೆ ಸೂತ್ರವನ್ನು ನಮೂದಿಸಲು ಕೇಂದ್ರ ಸರ್ಕಾರಕ್ಕೆ ಯಾವುದೇ ಅಧಿಕಾರ ಅಥವಾ ವ್ಯಾಪ್ತಿ ಇಲ್ಲ ಎಂದು ರಾಜ್ಯದ ಪರ ವಕೀಲ ಮೋಹನ್ ಕಾತರಕಿ ಅವರು ತಮ್ಮ ಲಿಖಿತ ಅಭಿಪ್ರಾಯದಲ್ಲಿ ತಿಳಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ಕರ್ನಾಟಕ ಸೇರಿದಂತೆ ಕಣಿವೆ ವ್ಯಾಪ್ತಿಯ ನಾಲ್ಕೂ ರಾಜ್ಯಗಳ ಅಭಿಪ್ರಾಯ ಪಡೆಯಲು ಕೇಂದ್ರ ಜಲ ಸಂಪನ್ಮೂಲ ಮಂತ್ರಾಲಯ ಕಳುಹಿಸಿರುವ ಸಂದೇಶದಲ್ಲಿ ಕಾವೇರಿ ಕಣಿವೆಯ ಅಂತಾರಾಜ್ಯ ಜಲ ವಿವಾದದ ಪ್ರಮುಖ ಅಂಶಗಳನ್ನು ಗುರುತಿಸಿ ದಾಖಲಿಸುವಂತೆ, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ದತ್ತಾಂಶ ಸಂಗ್ರಹಣೆ ಮತ್ತು ಪ್ರಸಾರದಲ್ಲಿ ವ್ಯವಸ್ಥೆ ರೂಪಿಸಲು ಸಲಹೆ ಮಾಡುವಂತೆ, ಸಾಮಾನ್ಯ ವರ್ಷ, ಶೇಕಡಾ 75 ರಷ್ಟು ಅವಲಂಭಿತ ವರ್ಷ ಹಾಗೂ ಶೇಕಡಾ 90 ಅವಲಂಭಿತ ವರ್ಷದ ವಿವಿಧ ಸನ್ನಿವೇಶಗಳಲ್ಲಿ ನೀರಿನ ಲಭ್ಯತೆ ಹಾಗೂ ಬೇಡಿಕೆಗಳನ್ನು ಅಂದಾಜಿಸುವಂತೆ, ನೀರಿನ ನ್ಯಾಯ ಸಮ್ಮತ ವಿತರಣೆಯನ್ನು ಖಾತರಿಪಡಿಸಲು ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಐತೀರ್ಪು ನಿಬಂಧನೆಗಳಂತೆ ಪ್ರತಿ ದಿನಕ್ಕೆ ಹತ್ತು ಬಾರಿ ಒಂದು ಜಲ ವರ್ಷದಲ್ಲಿ ನೀರು ಲಭ್ಯತೆ ಹಾಗೂ ಬೇಡಿಕೆಗಳನ್ನು ನಿರ್ಧರಿಸುವ ಹಾಗೂ ಸಂಕಷ್ಟ ವರ್ಷದಲ್ಲಿ ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಐತೀರ್ಪಿನ ಷರತ್ತು (6) ಮತ್ತು (9) ಅನುಷ್ಠಾನಗೊಳಿಸುವ ವಿಧಾನವನ್ನು ನಿರ್ಧರಿಸುವಂತೆ, ನೀರಿನ ಬಳಕೆಯ ತೀವ್ರತೆಯ ಮತ್ತು ಮಟ್ಟವನ್ನು ಕಡಿಮೆ ಮಾಡಿ ಪೂರೈಕೆ ಮತ್ತು ಬೇಡಿಕೆ ನಿರ್ವಹಣಾ ಆಯ್ಕೆಗಳ ಸಲಹೆ ಮಾಡುವಂತೆ ಹಾಗೂ ಅಂತಾರಾಜ್ಯ ಜಲ ವಿವಾದವನ್ನು ಬಗೆಹರಿಸಲು ಶಾಶ್ವತ ಸಾಂಸ್ಥಿಕ ಯಾಂತ್ರಿಕ ವ್ಯವಸ್ಥೆಯನ್ನು ಸಲಹೆ ಮಾಡುವಂತೆ ನಮೂದಿಸಲಾಗಿದೆ.

ಜಲ ಸಂಪನ್ಮೂಲ ಮಂತ್ರಾಲಯದ ಸಂದೇಶ ಕುರಿತು ವಕೀಲ ನಾರಿಮನ್ ಅವರೊಂದಿಗೆ ಚರ್ಚಿಸಿ, ಎಲ್ಲಾ ಪಕ್ಷಗಳ ಮುಖಂಡರು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ನಿಲುವನ್ನು ಕೇಂದ್ರಕ್ಕೆ ತಿಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆಯಲ್ಲಿ ಪ್ರಕಟಿಸಿದರು.

ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಲ ಸಂಪನ್ಮೂಲ ಸಚಿವ ಎಂ. ಬಿ. ಪಾಟೀಲ್ ಅವರು ಪ್ರಸಕ್ತ ಸಾಲಿನ ಮಾರ್ಚ್ ತಿಂಗಳಲ್ಲಿ ಕೇಂದ್ರ ಜಲ ಸಂಪನ್ಮೂಲ ಆಯೋಗವು ತಜ್ಞರ ಸಮಿತಿಯ ರಚನೆಯ ಬಗ್ಗೆ ಮುನ್ಸೂಚನೆ ನೀಡಿತ್ತು ಎಂದು ತಿಳಿಸಿದರು.

ಅಲ್ಲದೆ, ಕಾವೇರಿ ಜಲ ವಿವಾದ ಕುರಿತಂತೆ ಕರ್ನಾಟಕದ ಸಂವಾದಕ ಅರ್ಜಿ ( ಇಂಟರ್‌ಲೊಕೇಟರಿ ಅಪ್ಲಿಕೇಷನ್ ), ಅಂತಾರಾಜ್ಯ ಜಲ ವಿವಾದ ನ್ಯಾಯಾಧಿಕರಣ ಐತೀರ್ಪನ್ನು ಪ್ರಶ್ನಿಸಿರುವ ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಅರ್ಜಿಗಳ ವಿಚಾರಣೆಯು ಸರ್ವೋಚ್ಛ ನ್ಯಾಯಾಲಯದಲ್ಲಿ ಜುಲೈ 11 ಕ್ಕೆ ನಿಗದಿಯಾಗಿರುವ ಹಿನ್ನೆಲೆಯಲ್ಲಿ ಈ ಎಲ್ಲಾ ಅಂಶಗಳ ಕುರಿತು ವಕೀಲ ನಾರೀಮನ್ ನೇತೃತ್ವದ ತಂಡದೊಂದಿಗೆ ಚರ್ಚಿಸಿ ರಾಜ್ಯದ ಹಿತವನ್ನು ಕಾಪಾಡುವ ಸೂಕ್ತ ತೀರ್ಮಾನವನ್ನು ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

ಗೃಹ ಸಚಿವ ಡಾ ಜಿ. ಪರಮೇಶ್ವರ್, ಜಲ ಸಂಪನ್ಮೂಲ ಸಚಿವ ಎಂ. ಬಿ. ಪಾಟೀಲ್, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ. ಬಿ. ಜಯಚಂದ್ರ, ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್, ಜಾತ್ಯಾತೀತ ಜನತಾ ದಳದ ಮುಖಂಡರಾದ ಹೆಚ್. ಡಿ. ರೇವಣ್ಣ ಮತ್ತು ಬಸವರಾಜ ಹೊರಟ್ಟಿ, ಅಡ್ವೋಕೇಟ್ ಜನರಲ್ ಮಧುಸೂದನ್ ನಾಯಕ್, ರಾಜ್ಯ ಸರ್ಕಾರವನ್ನು ಪ್ರತಿನಿಧಿಸುತ್ತಿರುವ ಕಾನೂನು ತಂಡದ ಸದಸ್ಯರು, ಜಲ ಸಂಪನ್ಮೂಲ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಾಕೇಶ್ ಸಿಂಗ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳಾದ ಎಲ್. ಕೆ. ಅತೀಕ್ ಮತ್ತು ತುಷಾರ್ ಗಿರಿನಾಥ್ ಅವರೂ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

**************

ಡಿ ಪಿ ಎಂ

# ಸ್ವಯಂ ಸೇವಕ ಗೃಹರಕ್ಷಕರ ನೋಂದಣಿ

**ಬೆಂಗಳೂರು, ಮೇ 9 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ಜಿಲ್ಲಾ (ದಕ್ಷಿಣ) ಗೃಹರಕ್ಷಕ ದಳದಲ್ಲಿ ಖಾಲಿ ಇರುವ ಗೃಹ ರಕ್ಷಕ ಸದಸ್ಯತ್ವದ ಸ್ಥಾನಗಳನ್ನು ಭರ್ತಿಮಾಡಲು ಅರ್ಜಿ ಪಡೆಯಲಾಗಿದ್ದು, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ದಿನಾಂಕ 22-5-2017 ರಂದು ಬೆಳಿಗ್ಗೆ 8-00 ಗಂಟೆಗೆ ಮೂಲ ದಾಖಲೆಗಳೊಂದಿಗೆ ಕಛೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ವಿವರಗಳಿಗೆ ಕಮಾಂಡೆಂಟ್ ಹೋಮ್‌ಗಾರ್ಡ್, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು -42 ದೂರವಾಣಿ 080-25541012 ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.